1	2	3	4	5	6
20	Mysore		17145	19045.01	8099.99
21	Raichur		23918	22279.30	1638.70
22	Shimoga		3 045	30811.00	234.00
23	Tumkur		4 983	41957.33	25.67
24	U.Kannada		11760	9523.00	3237.00
25	Kodagu		3173	1746.77	1726.23
	TOTAL		**66900**	**623961.32**	**41038.68**

ಕೆ.ಆರ್.ನಗರ ತಾಲ್ಲೂಕಿನಲ್ಲಿ ಮುಖ್ಯ ಮಂತ್ರಿಗಳ ವಿಶೇಷ ಅನುದಾನದಡಿ ಕೈಗೊಂಡ ಕಾಮಗಾರಿಗಳು

2417 (2806) : ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಆರ್.ನಗರ ತಾಲ್ಲೂಕು ಚುಂಚನಕಟ್ಟೆ ಹೋಬಳಿಗೆ ಸೇರಿದ ಕೆ.ಆರ್.ರಸ್ತೆಯಲ್ಲಿ 23 ಕಿ.ಮೀ. ನಿಂದ ಮುಂದಕ್ಕೆ ಮುಖ್ಯ ಮಂತ್ರಿಗಳ ವಿಶೇಷ ಅನುದಾನದಡಿಯಲ್ಲಿ 40 ಲಕ್ಷ ರೂ.ಗಳು ಮಂಜೂರಾಗಿದ್ದ ಕಾಮಗಾರಿಯು ಯಾವ ಹಂತದಲ್ಲಿದೆ;

ಆ) ಕಾಮಗಾರಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ವಿಳಂಬಕ್ಕೆ ಕಾರಣರಾಗಿರುವವರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು;

ಈ) ಕಾಮಗಾರಿ ಪೂರ್ಣಗೊಳಿಸಲು ಕೈಗೊಂಡ ಕ್ರಮಗಳಾವುವು;

ಉ) ಎಷ್ಟು ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಕಿ.ಮೀ.23.00 ರಿಂದ 31.20 ಕಿಮೀವರೆಗೆ ಮೆಟಲಿಂಗ್, ಏರಿ ನಿರ್ಮಾಣ ಕಾಮಗಾರಿಗಳು, ಸರ್ಫೇಸ್, ಡ್ರೆಸಿಂಗ್ ಪೂರ್ಣಗೊಂಡಿದ್ದು ಶಾಂಬರೀಕರಣವಾಗ ಬೇಕಾಗಿದೆ.

ಆ) ಸರ್ಕಾರದ ಗಮನಕ್ಕೆ ಬಂದಿದೆ.

ಇ) ಗುತ್ತಿಗೆ ಕರಾರಿನನ್ವಯ ದಿನಾಂಕ21-8-2000 ರಂದು ಪ್ರಾರಂಭಿಸಿ 20-5-2001 ರೊಳಗೆ ಕಾಮಗಾರಿ ಪೂರ್ಣಗೊಳಿಸಬೇಕೆದ್ದು, ವಿಳಂಬವಾಗಿರುವ ಹಿನ್ನೆಲೆಯಲ್ಲಿ ಕರಾರಿನನ್ವಯ ಕ್ರಮ ತೆಗೆದುಕೊಳ್ಳಲಾಗುವುದು.

ಈ) ರೂ.75 ಕೋಟಿ ಯೋಜನಾ ಕಾರ್ಯಕ್ರಮದಡಿಯಲ್ಲಿ ಅನುದಾನದ ಲಭ್ಯತೆ ಇರದ ಕಾರಣ ಕಾಮಗಾರಿಯನ್ನು ಯಥಾ ಸ್ಥಿತಿಯಲ್ಲಿ ಅಂತಿಮಗೊಳಿಸಿ ತದನಂತರ ಲಭ್ಯವಾಗುವ ಅನುದಾನದಡಿ ಕಾಮಗಾರಿ ಕೈಗತ್ತಿಕೊಂಡು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಉ) ಉಳಿಕೆ ಕಾಮಗಾರಿಗೆ ಅನುದಾನ ಲಭ್ಯವಾದ ಕೂಡಲೇ ಇಲಾಖಾ ನಿಯಮಾನುಸಾರ ಕಾಮಗಾರಿ ಕೈಗತ್ತಿಕೊಂಡ ನಂತರ 2 ತಿಂಗಳೊಳಗೆ ಪೂರ್ಣಗೊಳಿಸಲಾಗುವುದು.